# ಎಳೆಯರ ಕನ್ನಡ ಎಲ್ಲರ ಕನ್ನಡ



ಕಲೆ: ಕೌಶಿಕ್ ಎಸ್.

ಇಂದಿನ ಎಳೆಯರಿಗೆ ಸಾಹಿತ್ಯವನ್ನು ಪರಿಚಯಿಸುವ ಸಾಧ್ಯತೆಗಳ ಗಂಭೀರ ಹುಡುಕಾಟ ಮಕ್ಕಳ ಸಾಹಿತ್ಯಕ್ಕೆ ಜೀವತುಂಬುವ ದೃಷ್ಟಿಯಿಂದ ಅಗತ್ಯ; ಕನ್ನಡದ ನಾಳೆಗಳಿಗೆ ಬಣ್ಣ ತುಂಬುವ ನಿಟ್ಟಿನಲ್ಲೂ ಮಕ್ಕಳ ಸಾಹಿತ್ಯಕ್ಕೆ ವಿಶೇಷ ಮಹತ್ವವಿದೆ. ನವೆಂಬರ್ ಸಂಚಿಕೆಯ ಕನ್ನಡ ಸಂಭ್ರಮವನ್ನು ಮಕ್ಕಳ ಸಾಹಿತ್ಯದ ಸಂಭ್ರಮವನ್ನಾಗಿ ನೋಡಬೇಕಾಗಿದೆ. ಈ ಕಾಳಜಿಯಿಂದಲೇ ಪ್ರತಿ ಸಂಚಿಕೆಯಲ್ಲೂ ಮಕ್ಕಳ ಸಾಹಿತ್ಯವನ್ನು ಒಳಗೊಳ್ಳಲು 'ಮಯೂರ' ಪ್ರಯತ್ನಿಸುತ್ತಿದೆ. ಮಕ್ಕಳ ಕವಿತೆ- ಕಥೆಗಳು, ಕೇಂದ್ರ ಸಾಹಿತ್ಯ ಅಕಾಡೆಮಿಯ ಬಾಲ ಸಾಹಿತ್ಯ ಪುರಸ್ಕಾರಕ್ಕೆ ಪಾತ್ರರಾದ ಕಥೆಗಾರ ಶಿವಲಿಂಗಪ್ಪ ಹಂದಿಹಾಳ್ ಅವರ ಸಂದರ್ಶನ ಹಾಗೂ ಇತ್ತೀಚಿನ ವರ್ಷಗಳಲ್ಲಿನ ಮಕ್ಕಳ ಸಾಹಿತ್ಯದ ಕೆಲವು ಉತ್ತಮ ಕೃತಿಗಳ ಕುರಿತ ಟಿಪ್ಪಣಿಗಳನ್ನು ಒಳಗೊಂಡಿರುವ ಈ ಸಂಚಿಕೆಯನ್ನು- ಹಿರಿಯರು ಗಮನಿಸಿ, ಮಕ್ಕಳ ಮನಸ್ಸಿಗೆ ಮುಟ್ಟಿಸಬೇಕೆನ್ನುವುದು 'ಮಯೂರ ಬಳಗ'ದ ಆಶಯ.

ವೀಣಾ ಶಾಂತೇಶ್ವರ ಹಾಗೂ ವಲೇರಿಯನ್ ರೊಡ್ರಿಗಸ್ ಅವರೊಂದಿಗಿನ ಸಂದರ್ಶನ ಬರಹಗಳು ಈ ಸಂಚಿಕೆಯ ವಿಶೇಷಗಳಲ್ಲಿ ಸೇರಿವೆ. ಕನ್ನಡದ ಅತ್ಯುತ್ತಮ ಕಥೆಗಾರ್ತಿಯರಲ್ಲಿ ಒಬ್ಬರಾದ ವೀಣಾ ಶಾಂತೇಶ್ವರ ಅವರು ಬಹಳ ಸಮಯದ ನಂತರ ಈ ಸಂದರ್ಶನದ ಮೂಲಕ ಓದುಗರಿಗೆ ಮುಖಾಮುಖಿ ಆಗುತ್ತಿದ್ದಾರೆ. ರೊಡ್ರಿಗಸ್ ಅವರು ಈ ದೇಶ ಕಂಡ ಮಹತ್ವದ ರಾಜಕೀಯ ಚಿಂತಕರಲ್ಲೊಬ್ಬರು ಹಾಗೂ ಅಂಬೇಡ್ಕರ್ ವಿಚಾರಗಳ ವಿಶ್ಲೇಷಕರು. ಈ ಇಬ್ಬರ ಮಹತ್ವದ ಸಂದರ್ಶನಗಳು 'ಮಯೂರ' ಓದುಗರ ಭಾವವಲಯಕ್ಕೆ ಹತ್ತಿರವಾಗಬಲ್ಲವು.

ಕನ್ನಡದ ಮುಖ್ಯ ಕಾದಂಬರಿಕಾರರಲ್ಲಿ ಒಬ್ಬರು ಹಾಗೂ ಜನಪ್ರಿಯ ಬರಹಗಾರರಾದ ಎಸ್.ಎಲ್. ಭೈರಪ್ಪನವರ ಬದುಕು-ಬರಹವನ್ನು ಅವರ ಗೈರುಹಾಜರಿಯಲ್ಲಿ ನೆನಪಿಸಿಕೊಳ್ಳುವ ಎರಡು ವಿಶಿಷ್ಟ ಬರಹಗಳು ಈ ಸಂಚಿಕೆಯಲ್ಲಿವೆ.

ಬಹುಮುಖಿ ವ್ಯಕ್ತಿತ್ವಗಳು ಹಾಗೂ ಕಥನಗಳನ್ನು ಒಳಗೊಂಡಿರುವ ಈ ಸಂಚಿಕೆಯ ಬಗೆಗಿನ ರಚನಾತ್ಮಕ ಟೀಕೆ-ಟಿಪ್ಪಣಿಗಳಿಗೆ ಸ್ವಾಗತ.

**ಮಯೂರ ಬಳಗ**
editormy@mayura.co.in